Electricity (New rates structure).

Q.—719. Sri P. R. RAMAIYA (Basavangudi).—

Will the Government be pleased to state :—

(*a*) whether any representations have been made to Government by power consumers in Bangalore that the new rate structure is very high and that it should be reduced ;

(*b*) the action taken by Government in this matter ?

A.—Sri H. M. CHANNABASAPPA (Minister for Revenue and Agriculture).—

(*a*) Yes.

(*b*) Certain modifications have been effected in the original order (*vide* copies of Press Notes dated 20th April 1956 and 7th August 1956 placed on the Table of the House).

ಶ್ರೀ ಪಿ. ಆರ್. ರಾಮಯ್ಯ.—ತಾವು 1956ನೇ ಆಗಸ್ಟ್ 7ನೆಯ ತಾರೀಖಿನಲ್ಲಿ ಮಾಡಿರತಕ್ಕ ಆರ್ಡರನ್ನು ಪುನಃ ವಿಮರ್ಶೆ ಮಾಡಿ ಜನರಿಗೆ ಅನುಕೂಲಪಡಿಸಿ ಕೊಡಬೇಕೆಂದು ತಮಗೆ ಮನವಿಗಳೇನಾದರೂ ಬಂದಿರುತ್ತವೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರದಲ್ಲೇ ತಿಳಿಸಿದ್ದೇನೆ. ಮನವಿಗಳು ಬಂದಿವೆ. ಇನ್ನೂ ಬರುತ್ತಲೇ ಇವೆ.

ಶ್ರೀ ಪಿ. ಆರ್. ರಾಮಯ್ಯ.—ತಮ್ಮ ಆರ್ಡರಿನಲ್ಲಿ ಈ ರಿಯಾಯಿತಿ ದರಗಳನ್ನು ನವೆಂಬರ್ ತಿಂಗಳವರೆಗೆ ಮಾತ್ರ ಕೊಡಲಾಗುತ್ತದೆಂದು ಹೇಳಿದ್ದೀರಿ. ಈ ರಿಯಾಯಿತಿ ದರಗಳನ್ನು ಮಾರ್ಚ್—ಏಪ್ರಿಲ್ ತಿಂಗಳಾಖ್ಯೆರವರೆಗೂ ಮುಂದುವರಿಸಿಕೊಡಬೇಕೆಂದು ಮನವಿಗಳು ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿವೆ.

ಶ್ರೀ ಪಿ. ಆರ್. ರಾಮಯ್ಯ.—ಆ ವಿಚಾರವಾಗಿ ಸರ್ಕಾರದವರೇನು ತೀರ್ಮಾನ ಕ್ಕೆಗೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆಯ ದಿವಸ ತಾನೆ ಆ ವಿಚಾರದಲ್ಲಿ ಯೋಗ್ಯತಾಯೋಗ್ಯತೆಗಳ ಮೇಲೆ ಪರಿಶೀಲನೆ ಮಾಡುತ್ತಿದ್ದೇವೆಂದು ಉತ್ತರ ಹೇಳಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಈ ವಿಚಾರದಲ್ಲಿ ಮುಂದಿನ ತಿಂಗಳಾಖ್ಯೆರಿನೊಳಗಾಗಾದರೂ ಆರ್ಡರ್ ಹೊರಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ನಾನು ಹೇಳಿಲ್ಲ. ಯೋಗ್ಯತಾಯೋಗ್ಯತೆಗಳನ್ನ ವಿಮರ್ಶೆ ಮಾಡಿ ನೋಡುತ್ತೇನೆಂದು ಮಾತ್ರ ತಿಳಿಸಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆ ಮಾಡುತ್ತೇವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಕೆ. ಪ್ರಭಾಕರ್.—ವಿದ್ಯುಚ್ಛಕ್ತಿ ದರಗಳನ್ನು ಜಾಸ್ತಿ ಮಾಡಿದ್ದರಿಂದ ಯಾವ ಯಾವ ಗುಂಪಿನ ಜನಗಳಿಗೆ ಬಹಳ ಕಷ್ಟವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರ್ಯಾರಿಗೆ ಕಷ್ಟವಾಗಿದೆಯೋ ಅವರೆಲ್ಲ ಅರ್ಜಿ ಹಾಕಿದ್ದಾರೆಂದು ಭಾವನೆ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್.—ಪ್ಲೋರ್ ಮಿಲ್‌ಗಳವರು ಬಹಳ ಕಷ್ಟಪಡುತ್ತಿದ್ದಾರೆಂದು ಅನೇಕ ಸಲ ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿದ್ದಾಗ್ಗೂ ಸರ್ಕಾರದವರು ಅವುಗಳನ್ನು ಪರಿಶೀಲನೆ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆ ಮಾಡಿ ಆಗಸ್ಟ್ ತಿಂಗಳಿನಲ್ಲಿ ಒಂದು ಆಜ್ಞೆಯನ್ನು ಹೊರಡಿಸಲಾಯಿತು.

Mr. SPEAKER.—These questions have been answered.

Binny Mill Tank (Breaching).

Q.—750. Sri R. ANANTARAMAN (Chamarajpet).—

Will the Government be pleased to state :—

(*a*) whether a decision was taken by Government to breach the Binny Mill tank;

(*b*) if so, what further action they have taken ?

A.—Sri H. M. CHANNABASAPPA (Minister for Revenue and Agriculture).—

(*a*) Yes.

(*b*) The matter is under further examination with reference to the cost involved.

Sri R. ANANTARAMAN.—May I know when you took the dicision to breach the tank ?

*Sri H. M. CHANNABASAPPA.—The decision to breach the tank was taken recently and the Government order is dated 16th July 1956.

Sri R. ANANTARAMAN.—Since how long it has been pending, Sir ?

Sri H. M. CHANNABASAPPA.—Ever since the Government Order was passed on 16th July 1956.

Sri R. ANANTARAMAN.—Since how long has the question of breaching the tank been pending, Sir ?

Sri H. M. CHANNABASAPPA.—The question is engaging the attention of Government from 18th March 1954.

Sri R. ANANTARAMAN.—Why is it that there has been such a long delay ?

Sri H. M. CHANNABASAPPA.—Because the question had to be examined in all its bearing before taking a decision.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಕೆರೆ ಒಡೆದ ಮೇಲೆ ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಟ್ಟುವುದಕ್ಕೆ ಉಪಯೋಗಿಸುತ್ತೀರಿ ಅಲ್ಲವೆ ?

Sri H. M. CHANNABASAPPA.—Government has passed orders that the area should be kept as open space.

Famine Affected Areas (measures for permanent relief)

Q.—810. Sri M U D D U R A M I A H (Koratagere).—

Will the Government be pleased to state.—

(*a*) whether a committee with the Minister for Agriculture as Chairman had been constituted with a view to undertake permanent relief measures for such areas as are frequently subjected to famine ;

(*b*) if so, the recommendations they have made to Government ?

A.—Sri H. M. CHANNABASAPPA (Minister for Revenue and Agriculture).—

(*a*) & (*b*) Yes ; only in respect of the Mysore District. Allotments from time to time to provide relief works in the distress areas are made in pursuance of the discussions at the meeting of the Committee. The Committee is also reviewing the progress in the execution of relief works and the adequacy of relief works undertaken.

ಶ್ರೀ ಮುದ್ದುರಾಮಯ್ಯ.—ನನ್ನ ಪ್ರಶ್ನೆಗೆ ಉತ್ತರವಾಗಿ ಹೌದು ಎಂದೂ ಮತ್ತು ಮೈಸೂರು ಜಿಲ್ಲೆಗೆ ಮಾತ್ರ ತಾತ್ಕಾಲಿಕ ಪರಿಹಾರವನ್ನು ಏರ್ಪಡಿಸುವುದಕ್ಕೆ ಒಂದು ಸಮಿತಿಯನ್ನು ಏರ್ಪಡಿಸಲಾಗಿದೆ ಎಂದೂ ಹೇಳಿದ್ದೀರಿ. ಇದರಲ್ಲಿ ಸಂಸ್ಥಾನಾ ಮಳೆ ಆಗಾಗ್ಗೆ ಅಭಾವಕ್ಕೆ ಒಳಗಾಗತಕ್ಕ ಪ್ರದೇಶಗಳಿಗೆ ಶಾಶ್ವತವಾದ ಪರಿಹಾರವನ್ನೇರ್ಪಾಡು ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡಿಲ್ಲವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸಮಿತಿಗೂ ಈ ಸಮಿತಿಗೂ ಸಂಬಂಧವಿಲ್ಲ. ಅದನ್ನು ಏರ್ಪಾಡು ಮಾಡಿದ್ದೀರಾ. ಇಲ್ಲವೇ ಎಂದು ಈ ಪ್ರಶ್ನೆಯಲ್ಲಿ ಕೇಳದೆ ಇದ್ದುದರಿಂದ ಕೊಟ್ಟಿಲ್ಲ.

ಶ್ರೀ ಮುದ್ದುರಾಮಯ್ಯ.—ಎರಡು ವರ್ಷಗಳ ಹಿಂದೆ ಇದೇ ಅಸೆಂಬ್ಲಿಯಲ್ಲಿ ಅಭಾವ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರಗಳನ್ನು ಕೈಗೊಳ್ಳುವುದಕ್ಕೋಸ್ಕರ ಒಂದು ಸಮಿತಿಯನ್ನು ಏರ್ಪಾಡು ಮಾಡಬೇಕೆಂದು ಕೇಳಿದಾಗ ಸಮಿತಿಯನ್ನು ರಚನೆ ಮಾಡುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದು ಸರ್ಕಾರದ ಗಮನದಲ್ಲಿಯೇ ?

Sri H. M. CHANNABASAPPA.—I would like to have notice for that.

ಶ್ರೀ ಮುದ್ದುರಾಮಯ್ಯ.—ಅಭಾವ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಏರ್ಪಾಡು ಮಾಡತಕ್ಕದ್ದು ಸರ್ಕಾರದವರ ಮುಖ್ಯ ಕರ್ತವ್ಯ ವಲ್ಲವೆ!

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಶಾಶ್ವತವಾದ ಪರಿಹಾರಗಳನ್ನು ಒದಗಿಸಲು ಅನೇಕ ಯೋಜನೆಗಳನ್ನು ಕೈಗೊಂಡಿದ್ದಾರೆ. ಅವು ಪರ್ಯಾಲೋಚನೆಯಲ್ಲಿವೆ.

ಶ್ರೀ ಮುದ್ದುರಾಮಯ್ಯ.—ಅಭಾವ ಪ್ರದೇಶಗಳಲ್ಲಿ ಸರ್ಕಾರದವರು ನಿಗದಿ ಮಾಡತಕ್ಕ ಒಂದು ಪ್ರತಿಫಲವೇ ನಿದೆಯೋ ಅದು ಬಹಳ ಜಾಸ್ತಿಯಾಗಿರುವುದರಿಂದ, ಈ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರಗಳನ್ನು ಏರ್ಪಾಡು ಮಾಡುವುದಕ್ಕೆ ಕಷ್ಟವಾಗಿದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಿಡೀ ಪ್ರತಿಫಲ ಬರುವುದನ್ನೇ ನೋಡಿದರೆ ತೊಂದರೆಯಾಗುತ್ತದೆಂದು ಭಾವಿಸಿ ಅಶ್ವಶಕ್ತಿಗೆ ಒಂದು ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದಿದ್ದುದನ್ನು 1,250 ರೂಪಾಯಿಗಳವರೆಗೂ ಖರ್ಚು ಮಾಡಬಹುದೆಂದು ಆಜ್ಞೆಯನ್ನು ಹೊರಡಿಸಿದ್ದೇವೆ.

ಶ್ರೀ ಮುದ್ದುರಾಮಯ್ಯ.—ಕೆರೆ ಮತ್ತು ಕಟ್ಟು ಕಾಲುವೆಗಳನ್ನು ತೆಗೆಯತಕ್ಕ ಕಾಲದಲ್ಲಿ ಯಾವ ರೀತಿಯಾದ ಪ್ರತಿಫಲವನ್ನು ಸರ್ಕಾರದವರು ನಿರೀಕ್ಷೆ ಮಾಡುತ್ತಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಕೇಳುವುದು ಕೆರೆ ಕಾಮಗಾರಿಗಳ ಸಂಬಂಧದಲ್ಲಿ, ಬರತಕ್ಕ ಹೆಚ್ಚುತ್ತಿ percentage ನಿರ್ಧರಿಸತಕ್ಕ ವಿಷಯವೆಂದು ಕಾಣುತ್ತದೆ. ಆ ವಿಷಯದಲ್ಲಿ ನಾವು ಯಾವ ರೀತಿ ಮಾಡಬೇಕೆಂದು ಸಮಿತಿಯವರು ಮಾಡಿರುವ ವರದಿಯಲ್ಲಿ ಅಡಕವಾಗಿದೆ.

ಶ್ರೀ ಮುದ್ದುರಾಮಯ್ಯ.—ಸಮಿತಿಯವರು ಏನು ಶಿಫಾರಸು ಮಾಡಿದ್ದಾರೆ ?